ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹೊನ್ನಾಳಿ.

ಸಿಸಿ.ನಂ.1271/2018

ಪಿರ್ಯಾದುದಾರರು : ನ್ಯಾಮತಿ ಪೋಲೀಸ್ ಠಾಣೆ

ವಿರುದ್ಧ

ಆರೋಪಿಗಳು : 1. ಕುಮಾರ ಬಿನ್ ಶೇಖರಪ್ಪ, 28 ವರ್ಷ,
2. ಶೇಖರಪ್ಪ ಎ. ಕೆ ಬಿನ್ ಎ. ಕೆ ದುರುಗಪ್ಪ, 40 ವರ್ಷ,
ಇವರಿಬ್ಬರ ವಾಸಃ ಮಾದನಬಾವಿ ಗ್ರಾಮ,
ನ್ಯಾಮತಿ ತಾಲ್ಲೂಕು, ಶಿವಮೊಗ್ಗ.

ಭಾ. ದಂ. ಪ್ರ. ಸಂ. ಕಲಂ. 313 ರನ್ವಯ ಆರೋಪಿಗಳ ಹೇಳಿಕೆ

ಪ್ರಶ್ನೆ.1: ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿ ತಿಳಿದುಕೊಂಡಿದ್ದೀರಾ?

ಉತ್ತರ :

ಪ್ರಶ್ನೆ.2: ಪ್ರಾಸಾ.1 ದೊಡ್ಡಬಸಪ್ಪ, ಪ್ರಾಸಾ.3 ರವಿನಾಯ್ಕ ಮತ್ತು ಪ್ರಾಸಾ.4 ಕೆ. ಮಂಜಪ್ಪ ಇವರುಗಳು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 20.09.2018 ರಂದು ತಾನು ಠಾಣಾ ಪ್ರಭಾರ ಕರ್ತವ್ಯದಲ್ಲಿದ್ದಾಗ, ಮಾದನಬಾವಿ ಗ್ರಾಮದಲ್ಲಿ ಯಾರೋ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಚಾಸಾ 1 ರವರು ವರದಿ ನೀಡಿರುತ್ತಾರೆ. ತಾವು ದಾಳಿಗೆ ಹೋಗಬೇಕು ಎಂದು ಚಾಸಾ 10 ರವರು ದಾಳಿಗೆ ಸಹಕರಿಸುವಂತೆ ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದು, ಅದರಂತೆ ಪಂಚರನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದು ಅವರಿಗೆ ಪ್ರಕರಣದ ಮಾಹಿತಿಯನ್ನು ನೀಡಿದ ಮೇರೆಗೆ ಅವರು ಒಪ್ಪಿಕೊಂಡಿದ್ದು, ಸಂಜೆ 5.20 ಗಂಟೆ ಸಮಯದಲ್ಲಿ ತಮ್ಮ ಇಲಾಖಾ ಜೀಪಿನಲ್ಲಿ ಮಾದನಬಾವಿ ಗ್ರಾಮಕ್ಕೆ ಹೋಗಿ ಕುಮಾರ್ ರವರ ಪೆಟ್ಟಿಗೆ ಅಂಗಡಿಗೆ ಫರ್ಲಾಂಗು ದೂರದಲ್ಲಿ ನಿಲ್ಲಿಸಿ ಮರೆನಿಂತು ನೋಡಲಾಗಿ, ಪೆಟ್ಟಿಗೆ ಅಂಗಡಿಯ ಮುಂಭಾಗ ಕುಮಾರ ಬಿನ್ ಶೇಖರಪ್ಪ ಹಾಗೂ ಶೇಖರಪ್ಪ ಬಿನ್ ದುರುಗಪ್ಪರವರು ಕೈಯಲ್ಲಿ ಮಧ್ಯದ ಪೌಚ್ ಗಳನ್ನು ಕೈಯಲ್ಲಿ ಹಿಡಿದುಕೊಂಡು ಮತ್ತು 1 ಬಿಳಿ ಬಣ್ಣದ ಚೀಲವನ್ನು ಹಿಡಿದುಕೊಂಡು ಮಾರಾಟ ಮಾಡುತ್ತಿದ್ದರು.

ಮುಂದುವರೆದು ಸಾಕ್ಷಿಯು ತಾವು ಮತ್ತು ಪಂಚರು ಸೇರಿ ಸದರಿ ವ್ಯಕ್ತಿಗಳನ್ನು ಸುತ್ತುವರೆದು ಹಿಡಿದುಕೊಂಡೆವು ಶೇಖರಪ್ಪರವರ ಸ್ಟಾರ್ ಬ್ಯಾಗ್ ಬಿಳಿ ಚೀಲದಲ್ಲಿ 49 ವಿಸ್ಕಿ ಪೌಚ್ ಗಳಿದ್ದವು. ಚಾಸಾ 10 ರವರು 2 ನೇ ಆರೋಪಿಯ ಅಂಗಶೋಧನೆ ಮಾಡಲಾಗಿ 1,530/- ರೂ.ಗಳಿದ್ದು

ಅದನ್ನು ಅಮಾನತ್ತುಪಡಿಸಿಕೊಂಡರು. 1 ನೇ ಆರೋಪಿಯ ಕೈಯಲ್ಲಿ ಹೈವರ್ಡ್ಸ್ ಚಿಯರ್ಸ್ ವಿಸ್ಕಿಯ 5 ಮಧ್ಯದ ಪೌಚ್ ಗಳು ಇದ್ದವು. 1 ನೇ ಆರೋಪಿಯ ಅಂಗಶೋಧನೆ ಮಾಡಲಾಗಿ 8,450/- ರೂ.ಗಳಿದ್ದವು. ಮಾರಾಟ ಮಾಡಲು ನಿಮಗೆ ಪರವಾನಗೆ ಇದೆಯಾ ಎಂದು ಚಾಸಾ 10 ರವರು ಆರೋಪಿಗಳಿಗೆ ಕೇಳಿದ್ದು ಅದಕ್ಕೆ ಅವರು ಪರವಾನಗೆ ಇಲ್ಲ ಎಂದು ತಿಳಿಸಿರುತ್ತಾರೆ. ಮಧ್ಯದ ಪೌಚ್ ಗಳನ್ನು ಪಂಚರ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಕಟ್ಟಿ ಎನ್‌ಎಂಟಿ ಎಂದು ಅರಗು ಸೀಲ್ ಹಾಕಿ ಪಂಚನಾಮೆ ಜರುಗಿಸಿ ಅಮಾನತ್ತುಪಡಿಸಿಕೊಳ್ಳಲಾಯಿತು. ನಂತರ ಕಚ್ಚಾ ನಕಾಶೆ ತಯಾರಿಸಿ, ಫೋಟೋಗಳನ್ನು ತೆಗೆಸಿರುತ್ತೇವೆ. ಆರೋಪಿಗಳನ್ನು ದಸ್ತಗಿರಿ ಮಾಡಿ, ಆರೋಪಿಗಳನ್ನು ಮತ್ತು ವಶಪಡಿಸಿಕೊಂಡ ಮಧ್ಯದ ಮಾಲನ್ನು ಠಾಣೆಗೆ ತೆಗೆದುಕೊಂಡು ಹೋಗಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳಲು ಇಚ್ಛಿಸುತ್ತೀರಿ?

ಉತ್ತರ :

ಪ್ರಶ್ನೆ.3: ಪ್ರಾಸಾ.5 ಹನುಮಂತಪ್ಪ ಶಿರಿಹಳ್ಳಿ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 20.09.2018 ರಂದು ಸಂಜೆ 4.45 ಗಂಟೆಗೆ ಚಾಸಾ 1 ರವರು ನೀಡಿದ ದೂರನ್ನು ಸ್ವೀಕರಿಸಿ, ಠಾಣಾ ಗುನ್ನೆ ನಂ.172/2018 ರಂತೆ ಪ್ರಕರಣವನ್ನು ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಪ್ರತಿಯನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಚಾಸಾ 1 ರವರ ಮೂಲಕ ಚಾಸಾ 2 ಮತ್ತು 3 ರವರನ್ನು ಪಂಚರಾಗಿ ಸಹಕರಿಸುವಂತೆ ಬರಮಾಡಿಕೊಂಡು ದಾಳಿಯ ಬಗ್ಗೆ ಮಾಹಿತಿ ನೀಡಿ ಅವರಿಗೆ ನೋಟೀಸ್ ಜಾರಿ ಮಾಡಿ ಅವರು ಒಪ್ಪಿಕೊಂಡ ಮೇರೆಗೆ ಪಂಚರೊಂದಿಗೆ ಇಲಾಖಾ ವಾಹನದಲ್ಲಿ ಸಂಜೆ 5.20 ಗಂಟೆಗೆ ಠಾಣೆಯಿಂದ ಮಾದನಬಾವಿ ಗ್ರಾಮಕ್ಕೆ ಹೊರಟು ದೂರದಲ್ಲಿ ಜೀಪನ್ನು ನಿಲ್ಲಿಸಿ 1 ನೇ ಆರೋಪಿಯ ಪೆಟ್ಟಿಗೆಯ ಅಂಗಡಿ ಮುಂಭಾಗ ಸಾರ್ವಜನಿಕ ಸ್ಥಳದಲ್ಲಿ ಇಬ್ಬರು ಆಸಾಮಿಗಳು ನಿಂತುಕೊಂಡಿದ್ದು ಮಧ್ಯದ ಪೌಚ್‌ಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವುದು ಕಂಡು ಬಂದಿತು. ತಾವು, ಸಿಬ್ಬಂದಿಗಳು ಮತ್ತು ಪಂಚರು ಸುತ್ತುವರೆದು ಸದರಿ ಆಸಾಮಿಗಳನ್ನು ಹಿಡಿದುಕೊಂಡಿರುತ್ತೇವೆ. ಮಧ್ಯ ಮಾರಾಟ ಮಾಡಲು ಪರವಾನಗೆ ಇದೆಯಾ ಎಂದು ಕೇಳಲಾಗಿ ಅವರು ಇಲ್ಲ ಎಂದು ತಿಳಿಸಿರುತ್ತಾರೆ. 2 ನೇ ಆರೋಪಿ ಕೈಯಲ್ಲಿದ್ದ ಬಿಳಿ ಬಣ್ಣದ ಸ್ಟಾರ್ ಹೆಸರಿನ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ ಎಲ್ ನ ಹೈವರ್ಡ್ ಚಿಯರ್ಸ್ ವಿಸ್ಕಿಯ 69 ಮಧ್ಯದ ಪೌಚ್ ಗಳು ಇದ್ದವು. ಆತನ ಜೇಬಿನಲ್ಲಿ ಮಧ್ಯ ಮಾರಾಟದಿಂದ ಸಂಗ್ರಹವಾಗಿದ್ದ 1,530/- ರೂ.ಗಳನ್ನು ವಶಪಡಿಸಿಕೊಂಡೆವು.

ಮುಂದುವರೆದು ಸಾಕ್ಷಿಯು 1 ನೇ ಆರೋಪಿ ಕೈಯಲ್ಲಿದ್ದ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ ಎಲ್ ನ ಹೈವರ್ಡ್ ಚಿಯರ್ಸ್ ವಿಸ್ಕಿಯ 5 ಮಧ್ಯದ ಪೌಚ್ ಗಳು ಇದ್ದವು. ಆತನ ಜೇಬಿನಲ್ಲಿ ಮಧ್ಯ ಮಾರಾಟದಿಂದ ಸಂಗ್ರಹವಾಗಿದ್ದ 8,450/- ರೂ ಗಳನ್ನು ವಶಪಡಿಸಿಕೊಂಡೆವು. ಪಂಚರ ಸಮಕ್ಷಮ ಸದರಿ ಮಧ್ಯದ ಪೌಚ್‌ಗಳನ್ನು ಹಾಗೂ ಹಣವನ್ನು

ಅಮಾನತ್ತುಪಡಿಸಿಕೊಂಡು, ಅವುಗಳನ್ನು ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಕಟ್ಟಿ ಎನ್‌ಎಂಟಿ ಎಂದು ಅರಗು ಸೀಲಿನಿಂದ ಸೀಲ್ ಮಾಡಿ, ಪಂಚನಾಮೆಯನ್ನು ಜರುಗಿಸಿ, ಕಚ್ಚಾ ನಕಾಶೆ ತಯಾರಿಸಿ, ಫೋಟೋಗಳನ್ನು ತೆಗೆಸಿ, ಪಂಚರ ಸಹಿಗಳನ್ನು ಪಡೆದುಕೊಂಡಿರುತ್ತೇನೆ. ಆರೋಪಿಗಳನ್ನು ಹಾಗೂ ವಶಪಡಿಸಿಕೊಂಡ ಮಾಲನ್ನು ಠಾಣೆಗೆ ತೆಗೆದುಕೊಂಡು ಹೋಗಿ ಆರೋಪಿಗಳಿಂದ ಸ್ವ-ಇಚ್ಛೆ ಹೇಳಿಕೆಗಳನ್ನು ಪಡೆದುಕೊಂಡು ದಸ್ತಗಿರಿ ಕ್ರಮ ಜರುಗಿಸಿ, ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನಂತರ ಅಮಾನತ್ತುಪಡಿಸಿಕೊಂಡ ಮಧ್ಯದ ಮಾಲು ಹಾಗೂ ಹಣವನ್ನು ಠಾಣಾ ಮಾಲುಪಟ್ಟಿಯಲ್ಲಿ ಸೇರಿಸಿರುತ್ತೇನೆ. ಚಾಸಾ 1 ರಿಂದ 6 ಮತ್ತು 8 ರವರ ಹೇಳಿಕೆಗಳನ್ನು ಮತ್ತು ಚಾಸಾ 7 ರವರಿಂದ 65 ಬಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ನಂತರ ಮಧ್ಯದ ಮಾಲನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿದ್ದು, ಚಾಸಾ 9 ರವರಿಂದ ಎಫ್ ಎಸ್ ಎಲ್ ವರದಿಯನ್ನು ಪಡೆದುಕೊಂಡಿರುತ್ತೇನೆ. ಆರೋಪಿತರ ವಿರುದ್ಧ ತನಿಖೆ ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಛಿಸುತ್ತೀರಿ?

ಉತ್ತರ :

ಪ್ರಶ್ನೆ.4: ನೀವು ಹೇಳುವುದು ಏನಾದರೂ ಇದೆಯೇ ?

ಉತ್ತರ :

ಆ 1). ಆ 2).

ಪ್ರಶ್ನೆ.5: ನಿಮ್ಮ ಪರ ಯಾರಾದರೂ ಸಾಕ್ಷಿದಾರರನ್ನು ವಿಚಾರಣೆ ಮಾಡಿಕೊಳ್ಳುವಿರಾ ?

ಉತ್ತರ :

ಆ 1). ಆ 2).

(ಸಾಕ್ಷಿ ವಿಚಾರಣೆಯಲ್ಲಿ ಕಂಡು ಬಂದ ಅಂಶಗಳ ಸಂಕ್ಷಿಪ್ತ ವಿವರಗಳನ್ನು ಆರೋಪಿಗಳಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಹೇಳಿದಂತೆ ಉತ್ತರಗಳನ್ನು ಬರೆದುಕೊಳ್ಳಲಾಯಿತು ಎಂದು ದೃಢೀಕರಿಸುತ್ತೇನೆ).

ಸ್ಥಳ : ಹೊನ್ನಾಳಿ

ದಿನಾಂಕ: 12.05.2026

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹೊನ್ನಾಳಿ.